

# ಅಪ್ಪ–ಅಮ್ಮನಿಗೆ ಒಂದು ಮಂದಿರ

ಉಳ್ಳವರು ದೇವರು, ದೇವತೆಗಳ ಸಲುವಾಗಿ ಮಂದಿರಗಳನ್ನು ನಿರ್ಮಿಸುವುದು ಸರ್ವೇಸಾಮಾನ್ಯ. ಅಭಿಮಾನಿಗಳು ತಮ್ಮ ನೆಚ್ಚಿನ ನಟ, ನಟಿಯರ ಸಲುವಾಗಿ ದೇವಾಲಯಗಳನ್ನು ಕಟ್ಟಿಸಿರುವ ಉದಾಹರಣೆಗಳೂ ಸಾಕಷ್ಟಿವೆ. ಪ್ರೇಯಸಿಯ ಸವಿ ನೆನಪಿಗಾಗಿ ಸ್ಮಾರಕಗಳನ್ನು ನಿರ್ಮಿಸಿದವರೂ ಇದ್ದಾರೆ. ಆದರೆ, ಅಪ್ಪ–ಅಮ್ಮನಿಗೆ ಗುಡಿ ಕಟ್ಟಿರುವ ಉದಾಹರಣೆಯನ್ನು ನೀವು ಬಲ್ಲಿರಾ?

ಮಾತೃ ದೇವೋಭವ ಎನ್ನುತ್ತೇವೆ. ಪಿತೃ ದೇವೋಭವ ಎನ್ನುತ್ತೇವೆ. ಆದರೆ, ನಮ್ಮ ಈ ಗೌರವ ಸಮರ್ಪಣೆಯೆಲ್ಲ ಬಾಯಿಮಾತುಗಳಲ್ಲೇ ಮುಗಿಯುತ್ತದೆ. ಹೆಚ್ಚುತ್ತಿರುವ ವೃದ್ಧಾಶ್ರಮಗಳ ಸಂಖ್ಯೆಯನ್ನು ನೋಡಿದರೆ ಹಿರಿಯರನ್ನು ನಾವು ಹೇಗೆ ನೋಡಿಕೊಳ್ಳುತ್ತಿದ್ದೇವೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ಮಾತಿಗೆ ಅಪವಾದ ಎನ್ನುವಂತೆ ಇಲ್ಲೊಬ್ಬರು ತನ್ನ ಹೆತ್ತವರ ನೆನಪಿಗಾಗಿ ದೇಗುಲವೊಂದನ್ನು ನಿರ್ಮಿಸಿದ್ದಾರೆ. ಆ ಮೂಲಕ 'ಅಪ್ಪ–ಅಮ್ಮ ಕಣ್ಣಿಗೆ ಕಾಣೋ ದೇವರು' ಎನ್ನುವ ಮಾತನ್ನು ನಿಜಗೊಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಹಾರೂಗೇರಿಯ ಬಿ.ಆರ್. ಆಜೂರ ಅವರು ತಮ್ಮ ಪೋಷಕರ ನೆನಪಿನಲ್ಲಿ ಮಂದಿರ ಕಟ್ಟಿಸಿದ್ದಾರೆ. ಈ ದೇಗುಲಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಈ ವಿಶಿಷ್ಟ ಮಂದಿರ ರೂಪುಗೊಂಡಿರುವುದು ಅವರ ತೋಟದ ಮನೆಯಲ್ಲಿ. ಸುಂದರವಾದ ಗುಡಿಯನ್ನು ಕಟ್ಟಿಸಿ, ಅಪ್ಪ–ಅಮ್ಮ ಇಬ್ಬರ ಮನೋಹರವಾದ ಶಿಲಾ ಮೂರ್ತಿಗಳನ್ನೂ ಸ್ಥಾಪಿಸಿದ್ದಾರೆ.

ಬಿ.ಆರ್ ಆಜೂರ ಅವರು ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ಶಿಕ್ಷಣ ತಜ್ಞರಾಗಿ ಗುರ್ತಿಸಿಕೊಂಡವರು. ತಮ್ಮೆಲ್ಲ ಸಾಧನೆಗೆ ಅಪ್ಪ–ಅಮ್ಮನೇ ಕಾರಣ ಎನ್ನುವ ನಂಬಿಕೆ ಅವರದು.

ತಮ್ಮ ತಂದೆ ರಾಮಪ್ಪ ಹಾಗೂ ತಾಯಿ ಗಂಗಮ್ಮ ಅವರ ಸ್ಮರಣೆಗಾಗಿ ಆಜೂರ ಅವರು ದೇವಾಲಯ ನಿರ್ಮಿಸಿದ್ದಾರೆ. ಅಷ್ಟು ಮಾತ್ರವಲ್ಲ, ಹೆತ್ತವರ ಹೆಸರಿನಲ್ಲಿ ಪ್ರತಿಷ್ಠಾನವೊಂದನ್ನು ಸ್ಥಾಪಿಸಿದ್ದಾರೆ. ಆ ಪ್ರತಿಷ್ಠಾನದ ಮೂಲಕ ನಾಡು ನುಡಿಗಾಗಿ ಸೇವೆ ಸಲ್ಲಿಸಿದ ಸಾಧಕರನ್ನು ಗುರ್ತಿಸಿ ಗೌರವಿಸುತ್ತಿದ್ದಾರೆ. 'ಆಜೂರ ಪ್ರತಿಷ್ಠಾನದ ಪ್ರಶಸ್ತಿ' ನೀಡುವ ಮೂಲಕ ತಮ್ಮ ಹೆತ್ತವರ ನೆನಪನ್ನು ನಾಡಿನಾದ್ಯಂತ ಪಸರಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಸುಮಾರು ಮೂರು ದಶಕಗಳಿಂದಲೂ ಈ ಕಾಯಕ ನಡೆಯುತ್ತಿದೆ.

■ ಚಂದ್ರಕಾಂತ ಮ. ತಾಳಿಕೋಟಿ


